(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು):- (ಸನ್ಮಾನ್ಯ ಅಧ್ಯಕ್ಷರೆ, ನೀರು ಬಿಡುತ್ತಿರುವುದನ್ನು ನಿಲ್ಲಿಸಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಈಗಾಗಲೇ ಐದೂವರೆ ಗಂಟೆಯಾಗಿದೆ ಎಂದು ಹೇಳಿದರು.)

ಶ್ರೀ ಬಿ.ಎಸ್.ಯಡಿಯೂರಪ್ಪ (ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು):- (ಅಧ್ಯಕ್ಷರೆ, ಇವತ್ತಲ್ಲದಿದ್ದರು ನಾಳೆಯಾದರು ನೀರನ್ನು ನಿಲ್ಲಿಸಿ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು ಎಂದು ಹೇಳಿದರು.)

ಶ್ರೀ ವಾಟಾಳ್ ನಾಗರಾಜ್:- ನಾವು ಧರಣಿಯನ್ನು ನಿಲ್ಲಿಸತಕ್ಕ ಪರಿಸ್ಥಿತಿಯಲ್ಲಂತೂ ಇಲ್ಲ. ಅವರು ತಮಿಳುನಾಡಿಗೆ ಸಂಪೂರ್ಣವಾಗಿ ನೀರು ಬಿಡುವುದನ್ನು ನಿಲ್ಲಿಸಿದ್ದೇವೆಂದು ಸ್ಪಷ್ಟವಾಗಿ ಇಲ್ಲಿ ಹೇಳಲೇಬೇಕು. ಅವರು ಹೇಳದಿದ್ದರೆ ನಾವು ನಮ್ಮ ಚಳುವಳಿಯನ್ನು ಮುಂದುವರೆಸುತ್ತೇವೆ. ನಾಳೆಯೂ ಧರಣಿಯನ್ನು ಮುಂದುವರೆಸುತ್ತೇವೆ.

ಅಧ್ಯಕ್ಷರು:- ನಮ್ಮ ಶಾಸಕರುಗಳಲ್ಲಿ ಅನೇಕರು ಸಂಸತ್ತಿಗೆ ಆಯ್ಕೆಯಾಗಿ ಹೋಗಿದ್ದಾರೆ, ಅದರ ಬಗ್ಗೆ ಪ್ರಕಟಣೆ ಇದೆ, ಅದನ್ನು ಪ್ರಕಟಣೆ ಮಾಡಿಬಿಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಮಿಳುನಾಡಿಗೆ ನೀರನ್ನು ಬಿಟ್ಟಿರುವ ಬಗ್ಗೆ ಸ್ವಲ್ಪ ಚರ್ಚೆಯಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ರಾಜ್ಯದ ಹಿತದೃಷ್ಟಿಯಿಂದ ನೀರನ್ನು ಬಿಡುವುದನ್ನು ನಿಲ್ಲಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಮೊದಲು ನೀರನ್ನು ಬಿಡುವುದನ್ನು ನಿಲ್ಲಿಸಲಿ ಆನಂತರ ಚರ್ಚೆ ಮಾಡೋಣ, ಯಾವ ತೀರ್ಮಾನಕ್ಕೆ ಬರುತ್ತೆವೋ ಅದರಂತೆ ಮುಂದೆ ಹೋಗೋಣ. ಇಲ್ಲದಿದ್ದರೆ ಬಹುಶ: ಮುಂದಿನ ದಿವಸಗಳಲ್ಲಿ ಅಲ್ಲಿ ಬರತಕ್ಕ ಯಾವುದೇ ಸರ್ಕಾರಕ್ಕೆ ಕೆಲಸ ಮಾಡುವುದಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ಬರುತ್ತದೆ. ಬರಗಾಲವಿದ್ದಾಗ ತಮಿಳುನಾಡಿಗೆ ನೀರು ಬಿಟ್ಟರು ಎನ್ನತಕ್ಕದ್ದು ಒಳ್ಳೆಯ ಪದ್ಧತಿಯಾಗುವುದಿಲ್ಲ. ದಯಮಾಡಿ ಮುಖ್ಯಮಂತ್ರಿಗಳು ಚರ್ಚೆ ಮಾಡುವುದಕ್ಕೆ ಒಪ್ಪಿಕೊಂಡರೆ ಒಳ್ಳೆಯದು.

ಅಧ್ಯಕ್ಷರು:- ಅವರು ಹೇಳಿದ್ದುದು ಬಹಳ ಮುಖ್ಯವಾದುದು. ಇವತ್ತು ಇವರು ನೀರು ಬಿಟ್ಟರೆ ನಾಳೆ ನೀವು ಅಧಿಕಾರಕ್ಕೆ ಬಂದರೆ ನೀವೂ ನೀರನ್ನು ಬಿಡಬೇಕಾಗುತ್ತದೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೆ, ಆಗಲೇ ಸದನದಲ್ಲಿ ಮಾತನಾಡುವಾಗ ಇದರ ಬಗ್ಗೆ ಏನಾದರೂ ಹೇಳಿದ್ದು ಕಡತಕ್ಕೆ ಹೋಗಿದ್ದಾಗ ದಯಮಾಡಿ ಅದನ್ನು ತೆಗೆಸಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು:- ಅದರ ಬಗ್ಗೆ ಕಡತವನ್ನು ಕೂಡಲೇ ತರಿಸಿ ನೋಡುತ್ತೇನೆ. ಈ ದಿವಸ ಬೆಳಿಗ್ಗೆ ಈ ವಿಚಾರ ಪ್ರಸ್ತಾಪಕ್ಕೆ ಬಂದಾಗ ಒಂದು ವೇಳೆ ಆಕಸ್ಮಾತಾಗಿ ಎಲ್ಲಾದರೂ ಬೇರೆ ರೀತಿಯಲ್ಲಿ ದಾಖಲೆಯಾಗಿದ್ದರೆ, ಪತ್ರಿಕೆಗಳವರು ಅದರ ಬಗ್ಗೆ ಗಮನಿಸಿಕೊಂಡಿದ್ದರೆ ದಯಮಾಡಿ ಅದನ್ನು ಪ್ರಚಾರಪಡಿಸುವಂತಿಲ್ಲ. ನಮ್ಮಲ್ಲಿ ನೀರಿಲ್ಲವೆಂಬುದನ್ನು ಸ್ಪಷ್ಟಪಡಿಸಬೇಕು.

ಪ್ರಕಟಣೆ

ಅಧ್ಯಕರು:- ವಿಧಾನ ಸಭೆಯ ಸದಸ್ಯರುಗಳಾದ ಶ್ರೀ ಆರ್.ಎಲ್.ಜಾಲಪ್ಪ, ಶ್ರೀ

ಹೆಚ್.ವೈ.ಮೇಟಿ, ಶ್ರೀ ಬಸವರಾಜರಾಮರೆಡ್ಡಿ, ಶ್ರೀ ಕೃಷ್ಣ, ಶ್ರೀ ಎಸ್. ಬಂಗಾರಪ್ಪ, ಶ್ರೀ ಖಿಮರುಲ್ ಇಸ್ಲಾಂ ಹಾಗೂ ಶ್ರೀ ಶಿವಾನಂದ ಹೆಚ್. ಕೌಜಲಗಿಯವರುಗಳು ವಿಧಾನ ಸಭೆಯ ಸದಸ್ಯತ್ವಕ್ಕೆ ನೀಡಿದ ರಾಜೀನಾಮೆಗಳನ್ನು ಅನುಕ್ರಮವಾಗಿ ದಿನಾಂಕ 27-5-95 ಮತ್ತು 7-6-1996 ರಂದು ಅಂಗೀಕರಿಸಲಾಗಿದೆ.

ನಾನು ಜೋಯಿಸರ ಹತ್ತಿರ ಕೇಳಿದ್ದೇನೆ; ಇವತ್ತು ಈ ವಿಚಾರ ತೆಗೆದುಕೊಂಡರೆ ಫಲಪ್ರದವಾಗುವುದಿಲ್ಲ, ಮುಹೂರ್ತ ಚೆನ್ನಾಗಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಇವತ್ತು ಸದನವನ್ನು ಮುಂದೂಡೋಣ.

ಶ್ರೀ ವಾಟಾಗಳ್ ನಾಗರಾಜ್:- ಯಾವ ಜೋಯಿಸರು?

ಅಧ್ಯಕ್ಷರು:- ನಮ್ಮವರೊಬ್ಬರು ಇದ್ದಾರೆ, ಆ ಒಂದು ಜಾಗದಲ್ಲಿ ನನಗೆ ರಕ್ಷಣೆ ಇದೆ, ಅದರ ಬಗ್ಗೆ ಹೇಳಬಿಟ್ಟರೆ ತಾವು ಅವರನ್ನೂ ಹಿಡಿದುಕೊಂಡು ನನಗೆ ತೊಂದರೆ ಕೊಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:- ಈಗ ಜೋಯಿಸರ ಕಾಟ ಬಹಳ ಜಾಸ್ತಿಯಾಗಿಬಿಟ್ಟಿದೆ. ಒಂದು ಕಡೆ ಪ್ರಧಾನ ಮಂತ್ರಿಯವರಿಗೆ, ಒಂದು ಕಡೆ ಮುಖ್ಯಮಂತ್ರಿಯವರಿಗೆ, ತಮಗೂ ಅದು ಹಿಡಿಸಿತೆ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು:- ನಿಮ್ಮವರು ನನ್ನವರೂ ಒಬ್ಬರೇ. ನಮ್ಮಿಬ್ಬರ ಜೋಯಿಸರೂ ಒಬ್ಬರೇ? ಆವರೇ ಮಮೂರು ಜೋಯಿಸರು; ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 11 ಗಂಟೆಗೆ ಮತ್ತೆ ಸಮಾವೇಶಗೊಳ್ಳೋಣ.

(ಸಭೆಯು 5-35ಕ್ಕೆ ಮುಕ್ತಾಯಗೊಂಡಿತು. ಪುನ: 10-7-96ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

(★ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿರುವುದಿಲ್ಲ)